ಟ್ರಸ್ಟ್ ಮುಂತಾದ ಪ್ರಕಾಶನ ಸಂಸ್ಥೆಗಳು ಅನೇಕ ವರ್ಷಗಳಿಂದ ಅನುವಾದ ಕೃತಿಗಳನ್ನು ಪ್ರಕಟಿಸುತ್ತಾ ಬಂದಿವೆ. ಇನ್ನು 'ಸುಧಾ', 'ಮಯೂರ', 'ತರಂಗ' ಮುಂತಾದ ಪತ್ರಿಕೆಗಳು ಅನುವಾದ ಕಥೆ, ಕಾದಂಬರಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಾ ಬಂದಿವೆ. ಕನ್ನಡ ಸಾಹಿತ್ಯ ಚರಿತ್ರೆಯ ವಿವಿಧ ಕಾಲಘಟ್ಟಗಳು, ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರಿದ ರಾಷ್ಟ್ರವಾದ, ಸ್ತ್ರೀವಾದಗಳು, ಪ್ರಗತಿಶೀಲ, ಬಂಡಾಯ, ದಲಿತ ಮೊದಲಾದ ಸಾಹಿತ್ಯಕ ಚಳುವಳಿಗಳು ಅನುವಾದಗಳಿಗೆ ಮುಕ್ತ ದಾರಿಯನ್ನು ಕಲ್ಪಿಸಿವೆ. ಅನುವಾದ ಸಾಹಿತ್ಯ ಚರಿತ್ರೆಯಲ್ಲಿ ಇದಕ್ಕೆ ಸಾಕಷ್ಟು ದೃಷ್ಟಾಂತಗಳು ನಮಗೆ ಸಿಗುತ್ತವೆ. 'ಗೋರಾ', 'ಉಚಲ್ಯಾ' 'ಅಕ್ರಮ ಸಂತಾನ' 'ಕುಣಿಯೇ ಘುಮಾ', 'ಮನೋಮಿ' 'ಸ್ತ್ರೀಪುರುಷ' 'ಅಡ್ಡಗೋಡೆಗಳನ್ನು ಒಡೆದು' ಇತ್ಯಾದಿಗಳು ಸಾಂಸ್ಕೃತಿಕ ಅಗತ್ಯಗಳಾಗಿ ಕನ್ನಡಕ್ಕೆ ಬಂದಿರುವ ಅನ್ಯಭಾಷಾ ಪಠ್ಯಗಳು," ಎಂದ ಗೀತಾ ಶೆಣ್ಯೆ ಅವರ ಮಾತನ್ನು ಒಪ್ಪಿಕೊಂಡರು ಗಂಗಾಧರನ್. ತಾನು ಅನುವಾದಕನಾಗಿ ಗುರುತಿಸಲು ಪತ್ರಿಕೆಗಳೇ ಕಾರಣ, ಹೀಗಾಗಿ ನನ್ನ ಒಂದು ಕೃತಿಯನ್ನು ಪತ್ರಿಕೆಗಳಿಗೆ ಸಮರ್ಪಿಸಿದ್ದೇನೆ ಎಂದರು.

ಇನ್ನು ಎರಡು ಭಾಷೆಗಳ ನಡುವಿನ ಭಾಷಾಂತರ ಪ್ರಕ್ರಿಯೆಯಲ್ಲಿ ಕೊಡುಕೊಳೆಗಳು ಸಮಾನವಾಗಿ ಯಾಕೆ ಇರುವುದಿಲ್ಲ, ಅದಕ್ಕೆ ಕಾರಣವೇನಿರಬಹುದು ಎನ್ನುವ ಚರ್ಚೆ ನಡೆಯಿತು. ಹೌದು ಮಲಯಾಳಂನಿಂದ ಕನ್ನಡಕ್ಕೆ ಸಾವಿರ ಕಥೆಗಳು ಬಂದಿರಬಹುದು, ಆದರೆ ಕನ್ನಡದಿಂದ ಮಲಯಾಳಂಗೆ ಹೋದ ಕಥೆಗಳ ಸಂಖ್ಯೆ ನೂರನ್ನು ದಾಟಿರಲಿಕ್ಕಿಲ್ಲ. ಅದಕ್ಕೆ ಕೇರಳದಲ್ಲಿ ಕನ್ನಡ ಸಾಹಿತಿಗಳ ಪರಿಚಯವಿಲ್ಲದಿರುವುದು ಮತ್ತು ಪ್ರಕಾಶಕರಿಂದ ಪ್ರಶಸ್ತಿ ವಿಜೇತ ಕೃತಿಗಳಿಗೆ ಆದ್ಯತೆ ಸಲ್ಲುವುದು ಕಾರಣವೆಂದು ಗಂಗಾಧರನ್ ಅಭಿಪ್ರಾಯ. ಮೂಲ ಲೇಖಕರ ಪರಿಚಯ, ಅವರ ಹಿನ್ನೆಲೆ ಗೊತ್ತಿಲ್ಲದೆ ಅವರ ಕೃತಿಯನ್ನು ಅನುವಾದಕ್ಕಾಗಿ ಕೈಗೆತ್ತಿಕೊಂಡರೆ ಆಗುವ ಅನಾಹುತವನ್ನು ಅವರು ಕೆ.ಎಸ್. ನರಸಿಂಹಸ್ವಾಮಿಯವರ ಕಾವ್ಯಾನುವಾದದ ಉದಾಹರಣೆಯೊಂದಿಗೆ ವಿವರಿಸಿದರು. ಕೆ.ಎಸ್.ನ ಅವರ ಪ್ರಸಿದ್ಧ ಕವಿತೆ 'ರಾಯರು ಬಂದರು ಮಾವನ ಮನೆಗೆ...' ಇದರಲ್ಲಿ ರಾಯರು ಪದವನ್ನು ಅನುವಾದಕ 'ರಾಜರು' ಎಂದು ಮಾಡಿದರಂತೆ. ತಪ್ಪನ್ನು ಎತ್ತಿ ತೋರಿಸಿದರೆ ಒಪ್ಪಲು ಸಿದ್ಧರಾಗಲಿಲ್ಲವಂತೆ. ಕವಿ ಜಮೀನ್ದಾರಿ ವ್ಯವಸ್ಥೆಯ ಹಿನ್ನೆಲೆಯವರು ಎಂದು ವಾದ ಬೇರೆ ಮಂಡಿಸಿದರಂತೆ. ಬೇರೆ ಯಾರ ವಿಚಾರದಲ್ಲಿ ಹೇಳಿದರೂ ನಂಬಬಹುದು ಆದರೆ ನರಸಿಂಹಸ್ವಾಮಿಯವರನ್ನು ಆ ನಿಟ್ಟಿನಲ್ಲಿ ನೋಡುವುದು ಸಾಧ್ಯವೇ ಎನ್ನುವುದು ಗಂಗಾಧರನ್ ಪ್ರಶ್ನೆ. ಇದು ಅನುವಾದಕ ತೆಗೆದುಕೊಳ್ಳುವ ಸ್ವಾತಂತ್ರ್ಯದ ಮಿತಿಯನ್ನು ಸೂಚಿಸುತಿರಬಹುದೇ?

ಕೊಂಕಣಿಗೆ ಸಂಬಂಧಿಸಿದಂತೆ ಹೇಳುವುದಾದರೆ ಕನ್ನಡದಿಂದ ಕೊಂಕಣಿಗೆ ಹೋದ ಕೃತಿಗಳು ಹೆಚ್ಚು ಇದ್ದು, ಕೊಂಕಣಿಯಿಂದ ಕನ್ನಡಕ್ಕೆ ಬಂದ ಕೃತಿಗಳು ಕಡಿಮೆ ಇದ್ದಂತಹ ಸಂದರ್ಭದಲ್ಲಿ ತಾನು ಈ ಕ್ಷೇತ್ರದಲ್ಲಿ ಪ್ರವೇಶ ಪಡೆದೆ ಎಂದು ಗೀತಾ ಶೆಣ್ಯೆ ಹೇಳಿದರು. ಕರ್ನಾಟಕದಲ್ಲಿ ಕೊಂಕಣಿ ಭಾಷಿಕ ಕನ್ನಡ ಸಾಹಿತಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೂ, ಅನುವಾದ ಕಾರ್ಯದಲ್ಲಿ ತೊಡಗಿಸಿಕೊಂಡವರು ತೀರಾ ಕಡಿಮೆ. ಮಂಜೇಶ್ವರ ಗೋವಿಂದ ಪೈ ಅವರನ್ನು ಮೊದಲ್ಗೊಂಡು ಗೋಪಾಲಕೃಷ್ಣ ಪೈ ವರೆಗೆ ಸುಮಾರು ಐವತ್ತಕ್ಕೂ ಹೆಚ್ಚು ಕೊಂಕಣಿ ಭಾಷಿಕ ಕನ್ನಡ ಲೇಖಕರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ಪಂಜೆ ಮಂಗೇಶರಾವ್, ಗೌರೀಶ ಕಾಯ್ಕಿಣಿ, ಲೀಲಾಬಾಯಿ ಕಾಮತ್, ಗಿರೀಶ್ ಕಾರ್ನಾಡ, ದಿನಕರ ದೇಸಾಯಿ, ಕೃಷ್ಣಾನಂದ ಕಾಮತ್, ಜಯಂತ ಕಾಯ್ಕಿಣಿ, ವಿವೇಕ ಶಾನಭಾಗ ಹೀಗೆ ಈ ಪಟ್ಟಿ ಬೆಳೆಯುತ್ತದೆ.

✿